**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.**,**ರವರ ನ್ಯಾಯಾಲಯ**,** ಕಡೂರು

ಓ ಎಸ್ ನಂ**. 422/2014**

ದಿನಾಂಕಃ**18.12.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

| | | |
|---|---|---|
| ಸಾಕ್ಷಿಯ ಹೆಸರು | ಗಿರೀಶ್ ಆರ್ ಕೆ | ಸಿಡಬ್ಲೂ-2 |
| ತಂದೆಯ ಹೆಸರು | ಕರಿಬಸಪ್ಪ | |
| ವಯಸ್ಸು | 35 ವರ್ಷ | |
| ಉದ್ಯೋಗ | ಸಹಾಯಕ ಅಭಿಯಂತರರು | |
| ವಾಸ | ಚಿತ್ರದುರ್ಗ | |

ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ-

ನನ್ನನ್ನು ಈ ನ್ಯಾಯಾಲಯವು ನ್ಯಾಯಾಲಯದ ನಿಯೋಗಿ ಎಂದು ನೇಮಕ ಮಾಡಿರುತ್ತದೆ. ಅದರಂತೆ ನಾನು ನ್ಯಾಯಾಲಯದಿಂದ ನಿಯೋಗಿಯ ವಾರೆಂಟನ್ನು ಪಡೆದುಕೊಂಡಿರುತ್ತೇನೆ. ಸದರಿ ವಾರೆಂಟ್ ದಾಖಲೆಯನ್ನು ನಿಸಿ-1 ಎಂದು ಗುರುತಿಸಲಾಯಿತು. ವಾರೆಂಟ್ ಜೊತೆಯಲ್ಲಿ ವಾದಿ ಮತ್ತು ಪ್ರತಿವಾದಿ ರವರು ಸಲ್ಲಿಸಿರುವ ಸೂಚನಾವಳಿಗಳನ್ನು ಪಡೆದುಕೊಂಡಿರುತ್ತೇನೆ. ವಾದಿ ಸಲ್ಲಿಸಿರುವ ಸೂಚನಾವಳಿಯನ್ನು ನಿಸಿ-2 ಎಂದು ಗುರುತಿಸಲಾಯಿತು. ನಾನು ಸ್ಥಳದಲ್ಲಿ ತಯಾರು ಮಾಡಿದ ನಕ್ಷೆಯನ್ನು ಮತ್ತು ಮಹಜರ್ ಗಳನ್ನು ಹಾಜರುಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಸಿ-3 ಮತ್ತು 4 ಎಂದು ಗುರುತಿಸಲಾಯಿತು. ನ್ಯಾಯಾಲಯದ ನಿಯೋಗಿ ಕರ್ತವ್ಯ ಮುಗಿದ ನಂತರ ನ್ಯಾಯಾಲಯಕ್ಕೆ ವರದಿ ಹಾಜರುಪಡಿಸಿರುತ್ತೇನೆ, ಸದರಿ ವರದಿಯನ್ನು ನಿಸಿ-5 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ವಾದಿ ಪರ ಶ್ರೀ ಡಿ ಎಸ್ ವಕೀಲರಿಂದಃ

ನಾನು ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿದ್ದ ಸೂಚನಾವಳಿಗಳನ್ನು ಅನುಸರಿಸಿ, ಆದರ ಆಧಾರದ ಮೇಲೆ ಅಳತೆ ಮಾಡಿ ನಕ್ಷೆ ತಯಾರು ಮಾಡಿರುತ್ತೇನೆ. ಸ್ಥಳದಲ್ಲಿ ತಯಾರಿಸಿದ ಮಹಜರ್ ನಲ್ಲಿ ಅಳತೆ ಮಾಡಿದ ಬಗ್ಗೆ, ಒತ್ತುವರಿ ಬಗ್ಗೆ, ನಕ್ಷೆ ತಯಾರು ಮಾಡಿದ ಬಗ್ಗೆ ನಮೂದು ಮಾಡಿರುವುದಿಲ್ಲ. ಸದರಿ ವಿಚಾರವನುನ ಮಹಜರಿನಲ್ಲಿ ನಮೂದು ಮಾಡಲು ತೊಂದರೆ ಇರಲಿಲ್ಲ. ವಾದಿಯು ಸಲ್ಲಿಸಿದ ಸೂಚನಾವಳಿಗಳಲ್ಲಿ ದಾವಾ ಸ್ವತ್ತಿನ ದಾಖಲೆಗಳನ್ನು ಪರಿಶೀಲನೆ ಮಾಡಿ ಗಡಿಗಳನ್ನು ಗುರುತಿಸಿ ಬೌಂಡರಿಗಳನ್ನು ಗುರುತಿಸಿ ಬಿ ಅನುಸೂಚಿ ಸ್ವತ್ತನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೋ ಎಂಬ ಬಗ್ಗೆ ವರದಿ ಮಾಡಲು ಹೇಳಿದ್ದು ಅದರಂತೆ ವರದಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಾನು ನನ್ನ ವರದಿಯಲ್ಲಿ ಮತ್ತು ನಕ್ಷೆಯಲ್ಲಿ ತಿಳಿಸಿರುತ್ತೇನೆ. ವಾದಿಯು ನೀಡಿದ

ಸೂಚನಾವಳಿಗಳಂತೆ ನಾನು ನಕ್ಷೆ ಮತ್ತು ವರದಿ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಎಷ್ಟು ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ನಿಸಿ 3 ರ ನಕ್ಷೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ನಕ್ಷೆಯಲ್ಲಿ ಮಾಡಿರುವುದಿಲ್ಲ ಆದರೆ ಒತ್ತುವರಿಯಾಗಿರುವುದಿಲ್ಲ ಎಂದು ವರದಿಯಲ್ಲಿ ನಮೂದು ಮಾಡಿರುತ್ತೇನೆ. ನಕ್ಷೆಯಲ್ಲಿ 0.6 ಮೀಟರ್ ಖಾಲಿ ಜಾಗ ಎಂದು ನಮೂದು ಮಾಡಿರುವ ಸ್ವತ್ತು ಪ್ರತಿವಾದಿಗೆ ಸೇರಿದ್ದಾಗಿರುತ್ತದೆ. ಸದರಿ 0.6 ಮೀ ಜಾಗವನ್ನು ಯಾರು ಉಪಯೋಗಿಸುತ್ತಿಲ್ಲ ಅದು ಓಣಿ ರೂಪದಲ್ಲಿ ಖಾಲಿ ಇರುತ್ತದೆ. ಸದರಿ ಓಣಿ ವಾದಿ ಮತ್ತು ಪ್ರತಿವಾದಿಗಳ ಜಾಗದ ನಡುವೆ ಇದೆ.

ನಾನು ಪ್ರತಿವಾದಿಗಳ ಸೂಚನಾವಳಿಗಳನ್ನು ಗಮನಿಸಿರುತ್ತೇನೆ. ಪ್ರತಿವಾದಿಗಳು ಈ ಹಿಂದೆ ನ್ಯಾಯಾಲಯದ ನಿಯೋಗಿಯನ್ನು ಆಯ್ಕೆ ಮಾಡಿದ ನಂತರ ಸಲ್ಲಿಸಿದ್ದ ಸೂಚನಾವಳಿಗಳನ್ನು ಅಳವಡಿಸಿಕೊಳ್ಳಲು ತಿಳಿಸಿದ್ದು, ಅದನ್ನು ನಾನು ಅಳವಡಿಸಿಕೊಂಡಿರುತ್ತೇನೆ. ಪ್ರತಿವಾದಿಗಳ ಸೂಚನಾವಳಿಯಂತೆ 40 x 60 ಅಡಿ ವಿಸ್ತೀರ್ಣದ ಮನೆಯನ್ನು ಅಳತೆ ಮಾಡುವುದು ಮತ್ತು ಅದರಲ್ಲಿ ಕ್ರಯಕ್ಕೆ ಪಡೆದ 40 x 30 ಅಡಿ ವಿಸ್ತೀರ್ಣದ ಸ್ವತ್ತನ್ನು ನಮೂದಿಸುವುದು ಎಂದು ತಿಳಿಸಿರುತ್ತಾರೆ, ಅದನ್ನು ನಕ್ಷೆಯಲ್ಲಿ ನಮೂದು ಮಾಡಿಲ್ಲ ಎಂದರೆ ಅವಶ್ಯಕತೆ ಇರಲಿಲ್ಲ.

ನಾನು ಇಬ್ಬರು ಪಕ್ಷಗಾರರು ಸಲ್ಲಿಸಿದ್ದ ಸೂಚನಾವಳಿಗಳನ್ನು ಅನುಸರಿಸಿ ನಕ್ಷೆ ತಯಾರುರಿಸಿರುತ್ತೇನೆ ಎಂದು ಹೇಳಿದ್ದು, ಮೇಲೆ ಹೇಳಿದಂತೆ 40 x 30 ಅಡಿ ವಿಸ್ತೀರ್ಣದ ಸ್ವತ್ತನ್ನು ನಕ್ಷೆಯಲ್ಲಿ ನಮೂದು ಮಾಡಲು ಅವಶ್ಯಕತೆ ಇಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಕೇವಲ ಒತ್ತುವರಿ ಕಂಡುಹಿಡಿಯುವುದು ವಿವಾದ ವಾಗಿರುತ್ತದೆ, ಆ ಕಾರಣ ಗುರುತಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನೇ ಈ ಹಿಂದೆ ನ್ಯಾಯಾಲಯದ ನಿಯೋಗಿ ಕೆಲಸ ಮಾಡಿದ್ದು ಆಗ ಮತ್ತು ಈಗ ಸಲ್ಲಿಸಿರುವ ನಕ್ಷೆಗಳಲ್ಲಿ ಮತ್ತು ವರದಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಮೊದಲ ನಕ್ಷೆಗೂ ಮತ್ತು ಈಗ ಸಲ್ಲಿಸಿರುವ ನಕ್ಷೆಗೂ ವ್ಯತ್ಯಾಸವಿದೆ ಎಂದರೆ ಸಾಕ್ಷಿಯು ಎಲ್ಲಾ ಸರಿ ಇದ್ದು, ಈಗ ಸಲ್ಲಿಸಿರುವ ನಕ್ಷೆಯಲ್ಲಿ ಮೂಲ ದಾಖಲೆಯ ಪ್ರಕಾರ ಎಂದು ನಮೂದಿಸಿರುವ ಅಂಶವಷ್ಟೆ ವ್ಯತ್ಯಾಸವಿರುತ್ತದೆ.

ಪ್ರತಿವಾದಿಗಳ ಸೂಚನಾವಳಿಗಳಲ್ಲಿ 30 X 40 ಅಡಿಗಳ ಸ್ವತ್ತಿನ ಪಶ್ಚಿಮಕ್ಕೆ ಇರುವ ಸ್ವತ್ತನ್ನು ಅಳತೆ ಮಾಡಿ ವರದಿ ನೀಡುವಂತೆ ಸೂಚಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಅಳತೆ

ಮಾಡಿರುತ್ತೇನೆ, ಆದರೆ ವರದಿಯಲ್ಲಿ ನಮೂದು ಮಾಡಿಲ್ಲ ಮತ್ತು ನಕ್ಷೆ ಮಾಡಿರುವುದಿಲ್ಲ. ಸದರಿ 30 X 40 ಅಡಿಗಳ ಸ್ವತ್ತಿನ ಮೇಲೆ ಇರುವ 1 ನೇ ಅಂತಸ್ತಿಗೆ ಹೋಗಲು ಇರುವ ಮೆಟ್ಟಿಲುಗಳನ್ನು ಯಾರು ಉಪಯೋಗಿಸುತ್ತಿದ್ದಾರೆ ಎಂದು ನಕ್ಷೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಮೆಟ್ಟಿಲುಗಳಿಂದ ನಾನು ಅಳತೆ ಮಾಡಿ ನಕ್ಷೆಯಲ್ಲಿ ತೋರಿಸಬೇಕಾಗಿತ್ತು ಆದರೆ ತೋರಿಸಿರುವುದಿಲ್ಲ ಎಂದರೆ ಸರಿ.

ಪ್ರತಿವಾದಿಗಳ ಸ್ವತ್ತಿನ ನಂತರ 30 ಅಡಿಗಳ ಸ್ವತ್ತನ್ನು ಗುರುತಿಸಿ ನಂತರ ಪಶ್ಚಿಮಕ್ಕೆ ಎಷ್ಟು ಜಾಗ ಉಳಿದಿದೆ ಎಂದು ಅಳತೆ ಮಾಡಬೇಕಾಗಿತ್ತು ಎಂದರೆ ಸಾಕ್ಷಿಯು ಪಶ್ಚಿಮಕ್ಕೆ ರಸ್ತೆ ಇದೆ ಎಂದು ನಕ್ಷೆಯಲ್ಲಿ ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳ ಸೂಚನಾವಳಿಗಳ ಪ್ರಕಾರ ಪ್ರತಿವಾದಿಗಳ ಜಾಗದ ನಂತರದ 30 ಅಡಿ ಜಾಗವನ್ನು ಗುರುತಿಸುವಂತೆ ಸೂಚಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ನನ್ನ ವರದಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ಪ್ರತಿವಾದಿಗಳು ಉಪಯೋಗಿಸುತ್ತಿರುವ ಮೆಟ್ಟಿಲುಗಳಿಂದ ಅಳತೆ ಮಾಡಿದ್ದರೆ ಒತ್ತುವರಿ ಜಾಗ ತಿಳಿದುಬರುತ್ತಿತ್ತು, ನಾನು ಉದ್ದೇಶಪೂರ್ವಕವಾಗಿ ಮೆಟ್ಟಿಲುಗಳಿಂದ ಅಳತೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅಳತೆ ಮಾಡಿ ಅದರ ವಿಸ್ತೀರ್ಣವನ್ನು ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮೆಟ್ಟಿಲುಗಳಿಂದ ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ನಮೂದು ಮಾಡಿರುವ 1.45 ಮೀ ಅಳತೆಯು ಮೆಟ್ಟಿಲುಗಳ ಅಳತೆಯಾಗಿರುತ್ತದೆ. ಅಳತೆಯ ಕಾಲದಲ್ಲಿ ಪೊಲೀಸರು ಹಾಜರು ಇದ್ದರು ಎಂದರೆ ಸರಿ. ಪೊಲೀಸರನ್ನು ಕರೆದುಕೊಂಡು ಹೋಗುವಂತೆ ನ್ಯಾಯಾಲಯದಿಂದ ಯಾವುದೇ ಆದೇಶವಿರಲಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಾವು ಅಳತೆ ಕಾರ್ಯಕ್ಕೆ ಹೋಗುವಾಗ ಪೊಲೀಸರಿಗೆ ನೋಟೀಸು ನೀಡಿ ಗಲಾಟೆಯಾಗುವ ಸಾಧ್ಯತೆ ಇರುತ್ತದೆ ಎಂದು ಕರೆದುಕೊಂಡು ಹೋಗುತ್ತೇವೆ ಎಂದು ನುಡಿಯುತ್ತಾರೆ. ನಾನು ಮೊದಲಬಾರಿ ನಿಯೋಗಿ ಕೆಲಸ ಮಾಡಲು ಹೋಗಿದ್ದಾಗ ಪೊಲೀಸರನ್ನು ಕರೆದುಕೊಂಡು ಹೋಗಿದ್ದೆ ಎಂದರೆ ಸರಿ. ಆಗ ಗಲಾಟೆಯಾಗಿರಲಿಲ್ಲ ಎಂದರೆ ಸರಿಯಲ್ಲ, ಗಲಾಟೆಯಾಗಿತ್ತು. ಗಲಾಟೆಯಾದ ಬಗ್ಗೆ ಮಹಜರ್ ಅಥವಾ ವರದಿಯಲ್ಲಿ ನಮೂದು ಮಾಡಿರುವುದಿಲ್ಲ. ವರದಿಯನ್ನು ಹಾಗೂ ನಕ್ಷೆಯನ್ನು ಕಛೇರಿಯಲ್ಲಿ ತಯಾರು ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ಕಚ್ಚಾ ನಕಾಶೆಯನ್ನು ಸ್ಥಳದಲ್ಲಿ ತಯಾರು ಮಾಡಿಕೊಂಡು ಬಂದು ನಂತರ ನ್ಯಾಯಾಲಯಕ್ಕೆ

ಹಾಜರುಪಡಿಸಿರುವ ನಕ್ಷೆಯನ್ನು ಕಛೇರಿಯಲ್ಲಿ ತಯಾರು ಮಾಡಿರುತ್ತೇನೆ. ಸದರಿ ಕಚ್ಚಾ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸದರಿ ಕಚ್ಚಾ ನಕಾಶೆಗೆ ವಾದಿ ಮತ್ತು ಪ್ರತಿವಾದಿಗಳ ಸಹಿ ಪಡೆದಿಲ್ಲ.

ಸೂಚನಾವಳಿಗಳ ಪ್ರಕಾರ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರು ಮಾಡಿ ವರದಿ ನೀಡಬೇಕು ಎಂದು ನಮೂದು ಇದೆ ಎಂದರೆ ಸರಿ. ಅದರ ಪ್ರಕಾರ ನಾನು ಕಚ್ಚಾ ನಕ್ಷೆ ಸಲ್ಲಿಸಿಲ್ಲ ಎಂದರೆ ಸರಿ. ದಿಃ17.11.2022 ರ ಆದೇಶ ಪುಟದಲ್ಲಿ ನ್ಯಾಯಾಲಯದ ನಿಯೋಗಿ ವರದಿಯಲ್ಲಿ ಕೇವಲ ನಕ್ಷೆಯನ್ನು ಮಾತ್ರ ಹಾಜರುಪಡಿಸಿರುತ್ತಾರೆ, ವರದಿಯನ್ನು ನೀಡಿರುವುದಿಲ್ಲ ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಆ ದಿನಾಂಕದಂದು ವರದಿಯನ್ನು ಯಾವ ಕಾರಣಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ವರದಿ ಮತ್ತು ನಕ್ಷೆ ಎರಡನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಸೂಚನಾವಳಿಗಳನ್ನು ಅನುಸರಿಸದೆ ನಿಯೋಗಿ ಕೆಲಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ನಕ್ಷೆ ಮತ್ತು ಮಹಜರ್ ಅನ್ನು ತಯಾರಿಸದ ಕಾರಣ ಒತ್ತುವರಿಯನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವರದಿಯಲ್ಲಿ ನಮೂದು ಮಾಡಿರುತ್ತೇನೆ. ನಾನು ಸಲ್ಲಿಸಿದ್ದ ಮೊದಲನೇ ವರದಿಯಲ್ಲಿ ವಾಸ್ತವ ಸ್ಥಿತಿ ತೋರಿಸುತ್ತಿತ್ತು ಆದರೆ ಈಗ ಸಲ್ಲಿಸಿದ ವರದಿಯು ಪ್ರತಿವಾದಿಗಳಿಗೆ ಅನುಕೂಲವಾಗಲೆಂದು ಸಲ್ಲಿಸಿರುವ ವರದಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾಸ್ತವ ಸ್ಥಿತಿಯನ್ನು ನ್ಯಾಯಾಲಯಕ್ಕೆ ತೋರಿಸುವಂತೆ ವಿಫಲನಾಗಿರುತ್ತೇನೆ ಎಂದರೆ ಸರಿಯಲ್ಲ.

ಸೂಚನಾವಳಿಗಳಲ್ಲಿ ವಾದಿಯ ಸ್ವತ್ತಿನ ಗಡಿ ಗುರುತಿಸಬೇಕು ಎಂದು ಹೇಳಿದ್ದು, ನಾನುಗಡಿ ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಕ್ಷೆಯ ಪ್ರಕಾರ ವಾದಿಯ ಸ್ವತ್ತಿನ ಗಡಿಯಿಂದ ಪೂರ್ವ ಪಶ್ಚಿಮ 4.05 ಮೀ ಉತ್ತರಕ್ಕೆ 4.90 ಮೀ ಅಳತೆ ಇದೆ. ನಕ್ಷೆಯಲ್ಲಿ ನಾನು ಚುಕ್ಕಿ ಗೆರೆ ಎಳೆದಿರುವ ಜಾಗದಲ್ಲಿ ವಾದಿಯ ಮನೆಯ ಗೋಡೆ ಇದೆ ಎಂದರೆ ಸರಿ. ಸದರಿ ಗೆರೆಗೆ ಹೊಂದಿಕೊಂಡಂತೆ ಕಾಣಿಸಿರುವ ಮೆಟ್ಟಿಲುಗಳು ವಾದಿಯ ಜಾಗಕ್ಕೆ ಸೇರುತ್ತದೆ ಮತ್ತು ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ 60 X 40 ಅಡಿ ಯ ಜಾಗದಲ್ಲಿ ವಾದಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ತಿಳಿಸಿದ್ದು, ಈ ವಿಚಾರವನ್ನು ನಾನು ನನ್ನ ಮೊದಲನೇ ವರದಿಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ

ವರದಿಯನ್ನು ನೋಡಿ ಅದರಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ನನ್ನ 1 ನೇ ಮತ್ತು 2 ನೇ ವರದಿಗೂ ತಾಳೆ ಇಲ್ಲ ಎಂದರೆ ಸರಿಯಲ್ಲ.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಂ ಜೆ ವಕೀಲರಿಂದಃ

ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸು ಜಾರಿ ಮಾಡಿದ್ದೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ವಾದಿ, ಪ್ರತಿವಾದಿಗಳು, ಪೊಲೀಸರು ಮತ್ತು ಪಿ ಡಿ ಓ ಹಾಜರು ಇದ್ದರು. ವಾದಿ ಮತ್ತು ಪ್ರತಿವಾದಿಗಳ ಸೂಚನಾವಳಿಗಳಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರುಪಡಿಸುವ ದಾಖಲೆಗಳನ್ನು ಪರಿಶೀಲನೆ ಮಾಡಿ ಅಳತೆ ಮಾಡಬೇಕು ಎಂದು ಸೂಚಿಸಿರುತ್ತಾರೆ ಎಂದರೆ ಸರಿ. ಆ ದಿನ ವಾದಿಗಳು ಕ್ರಮ ಸಂ.313 ರ ಅಸೆಸ್ ಮೆಂಟ್ ಜೆರಾಕ್ಸ್ ಪ್ರತಿ, ಖಾತೆ ಬದಲಾವಣೆಯ ಕ್ರಯಪತ್ರ ಹಾಜರುಪಡಿರಸಿತ್ತಾರೆ. ಆ ದಿನ ಪ್ರತಿವಾದಿಗಳು ಅಸೆಸ್ ಮೆಂಟ್ ಜೆರಾಕ್ಸ್ ಪ್ರತಿ, ಮಂಜೂರಾತಿ ಪತ್ರ, ಕಡೂರು ನ್ಯಾಯಾಲಯದ ಓ ಎಸ್ 41/1977 ರ ತೀರ್ಪಿನ ಪ್ರತಿಯನ್ನು ನೀಡಿರುತ್ತಾರೆ. ಪ್ರತಿವಾದಿಯು ಹಾಜರುಪಡಿಸಿದ ಅಸೆಸ್ ಮೆಂಟ್ ಪ್ರತಿ ಪ್ರಕಾರ ಅವರ ಜಾಗದ ವಿಸ್ತೀರ್ಣ 60 X 40 ಅಡಿ ಇತ್ತು, ಅವರು ಹಾಜರುಪಡಿಸಿದ ಮಂಜೂರಾತಿ ಪತ್ರದಲ್ಲಿಯೂ ಸಹಃ ಅವರ ಜಾಗದ ವಿಸ್ತೀರ್ಣ 60 X 40 ಅಡಿ ಎಂದು ಇತ್ತು. ಸದರಿ 60 X 40 ಅಡಿ ವಿಸ್ತೀರ್ಣದ ಜಾಗ ಅಳತೆ ಮಾಡುವಾಗ ವಾದಿಗೆ ಸೇರಿದ ಜಾಗವು ಸಹ ಅದರ ಒಳಗೆ ಸೇರಿತ್ತು ಎಂದರೆ ಸರಿ. ಅದೇ ರೀತಿ ನಾನು ನಕ್ಷೆಯಲ್ಲಿಯೂ ಸಹ 60 X 40 ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನನ್ನ ವರದಿ ಪ್ರಕಾರ ಪ್ರತಿವಾದಿಗಳು ವಾದಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗಳು ಸೂಚನಾವಳಿಗಳಲ್ಲಿ ತಿಳಿಸಿದ್ದಂತೆ ಕಚ್ಚಾ ನಕಾಶೆ ತಯಾರು ಮಾಡಿ ವರದಿ ನೀಡಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.